**SC No.274/2024**
**P.W. 3**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 274/2024** **P.W.3**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **06.04.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **NSG** ವಕೀಲರಿಂದ :</u>

1. ನನಗೆ ಇಬ್ಬರು ಮಕ್ಕಳಿದ್ದು ಈಗ ಒಬ್ಬ ಇದ್ದಾರೆ. ನನ್ನ ಮಗ ಮಹಾದೇವನ ಮೇಲೆ ಕೊಲೆ ಪ್ರಕರಣಗಳು ಇತ್ತು ಮತ್ತು ಜಾಮೀನಿನ ಮೇಲೆ ಇದ್ದಾನೆ ಎಂದರೆ ಸರಿ. ನನ್ನ ಮಗ ಮಹಾದೇವ ರೌಡಿ ಶೀಟರ್ ಎಂದರೆ ಸರಿ. ನನ್ನ ಮಗನನ್ನು ಪೊಲೀಸರು ಆಗಾಗ್ಗೆ ಠಾಣೆಗೆ ಕರೆಸುತ್ತಾರೆ ಎಂದರೆ ಗೊತ್ತಿಲ್ಲ. ಗಿರಿಗೌಡನದೊಡ್ಡಿಯಲ್ಲಿ ನನ್ನ ಮಗ ವ್ಯವಸಾಯ ಮಾಡುತ್ತಾನೆ. ನನ್ನ ಮಗ ರಾಜಕೀಯವಾಗಿ ಪಕ್ಷಕ್ಕೆ ಬೆಂಬಲ ಕೊಡುತ್ತಿದ್ದ ಎಂದರೆ ಸರಿ. ಗುಂಡಪ್ಪ ಎನ್ನುವವರಿಗೆ ಬೆಂಬಲ ನೀಡುತ್ತಿದ್ದ. ನನಗೆ ಸುದರ್ಶನ್ ರವರ ಪರಿಚಯ ಇಲ್ಲ. ಸಿದ್ದಪ್ಪ, ಸುರೇಶ್, ಬ್ಯಾಟರಾಜು ಮತ್ತು ಮಹೇಶ್ ರವರ ಪರಿಚಯ ಇದೆ. ಘಟನೆ ನಡೆದ ದಿನಾಂಕ ನನಗೆ ಗೊತ್ತಿಲ್ಲ. ನನಗೆ ಯಾರೋ ಬಂದು ಹೇಳಿದ್ದರಿಂದ ರಾತ್ರಿ 9.00 ಕ್ಕೆ ನಾನು ಒಬ್ಬನೇ ಹೋದೆ. ನನ್ನ ಜೊತೆಗೆ ಬೇರೆ ಯಾರು ಬರಲಿಲ್ಲ. ನಾನು ನಡೆದುಕೊಂಡೆ ಹೋದೆ. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಸುಮಾರು 250 ಮೀಟರ್ ದೂರದಲ್ಲಿ ಇದೆ. ನನಗೆ ರಾತ್ರಿ 9.30 ಕ್ಕೆ ವಿಚಾರ ತಿಳಿಸಿದರು. ನಾನು ಸ್ಥಳಕ್ಕೆ ಹೋದಾಗ ಸುಮಾರು 100 ಜನರು ಇದ್ದರು. ಯಾರು ಯಾರು ನಿಂತಿದ್ದರು ಮತ್ತು ಅವರುಗಳು ಕೈಯಲ್ಲಿ ಮೊಬೈಲ್ ಇದ್ದ ಬಗ್ಗೆ ನಾನು ನೋಡಿಲ್ಲ, ಅಲ್ಲಿ ನಿಂತಿದ್ದ ಜನಗಳ ಕೈಯಲ್ಲಿ ಏನಿತ್ತು ಎಂದು ನಾನು ನೋಡಿಲ್ಲ. ನನ್ನ ಮಗನಿಗೆ ಸುಸ್ತಾಗಿತ್ತು. ನನ್ನ ಮಗನನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ನನ್ನ ಮಗನನ್ನು ಪೊಲೀಸರು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಮಗನನ್ನು ಅಲ್ಲಿಯೇ ಬಿಟ್ಟ ಮನೆಗೆ ಹೋದೆ. ಮನೆಗೆ ರಾತ್ರಿ 10.00 ಕ್ಕೆ ಹೋದೆ.

2. ಪೊಲೀಸರು ಕಾರಿನಲ್ಲಿ ನನ್ನ ಮಗನನ್ನು ಕರೆದುಕೊಂಡು ವಿಚಾರ ತಿಳಿಯಿತು. ಸದರಿ ವಿಚಾರವನ್ನು ಪೊಲೀಸರು ತಿಳಿಸಿದರು. ನನ್ನ ಮಗ ಮಧ್ಯಪಾನ ಮಾಡುವುದಿಲ್ಲ. ನನ್ನ ಮಗ ಮನೆಯ

ಹೊರಗಡೆ ಕುಡಿಯುತ್ತಾನೋ ಇಲ್ಲವೋ ಗೊತ್ತಿಲ್ಲ. ನನ್ನ ಮಗ ಕುಡಿದುಕೊಂಡು ಹುಡುಗರ ಜೋತೆಗ ಹೋಗಿದ್ದ ಎಂದರೆ ಸರಿ ಅಲ್ಲ. ನನ್ನ ಮಗನ ಸ್ನೇಹಿತ ಬಂದು ನನ್ನ ಮಗನನ್ನು ಮನೆಯಿಂದ ಕರೆದುಕೊಂಡು ಹೋಗಿದ್ದು ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ. ನನ್ನ ಮಗನ ಸ್ನೇಹಿತ ಸುಮಾರು ಅಡಕಸವಿ. ನನ್ನ ಮಗನ ಸ್ನೇಹಿತ ಆತ ಬರುವುದಿಲ್ಲವೆಂದರೂ ಹಿಂಸೆ ಮಾಡಿ ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋದ. ನಾನು ಆತನನ್ನು ತಡೆಯುವ ಪ್ರಯತ್ನ ಮಾಡಿಲ್ಲ. ನನ್ನ ಮಗನ ಸ್ನೇಹಿತ ಆತನನ್ನು ಕರೆದುಕೆಂಡು ಹೋಗಿ ಆತನೇ ಹೊಡೆದಿದ್ದು ನಮಗೆ ಅದು ಮೊದಲು ಗೊತ್ತಾಗಲಿಲ್ಲ. ನಾವು ಆತನನ್ನು ಯಾಕೆ ಹೊಡೆದು ಎಂದು ಕೇಳಲಿಲ್ಲ. ಮೊದಲು ಆತನ ನಮಗೆ ಬರುತ್ತಿದ್ದು ನಂತರದಲ್ಲಿ ಜಗಳವಾದ್ದರಿಂದ ಬಿಟ್ಟಿದ್ದ.

3. ನನ್ನ ಮಗನ ಸ್ನೇಹಿತ ಭೋವಿ ಜಾತಿಯವರು. ಆತನ ಹೆಸರು ಗೊತ್ತಿಲ್ಲ. ಆತ ನಮ್ಮ ಊರಿನವರು. ನಾವು ಬೆಳಗ್ಗೆ 6.00 ಕ್ಕೆ ಆಸ್ಪತ್ರೆಗೆ ಹೋದೆವು. ನಾನು ಆ ದಿನ ಠಾಣೆಗೆ ರಾತ್ರಿ ಹೋಗಿಲ್ಲ. ನಾವು ದೂರು ಕೊಡುವವರೆಗೆ ಆಸ್ಪತ್ರೆಯಲ್ಲಿ ಆತನನ್ನು ಒಳರೋಗಿಯಾಗಿ ದಾಖಲು ಮಾಡಿಕೊಳ್ಳಲಿಲ್ಲ. ದೂರು ನೀಡಿದ ನಂತರ ದಾಖಲು ಮಾಡಿಕೊಂಡರು. ದೂರು ಕೊಡಲು ನಾನು ಒಬ್ಬನೇ ಹೋಗಿದ್ದೆ. ದೂರನ್ನು ನಾನೇ ಬರೆದುಕೊಟ್ಟೆ. ನಂತರ ಪೊಲೀಸರು ಬಂದು ಮಹಜರ್ ಮಾಡಿದರು. ಬೆಳಗ್ಗ 6.30 ಕ್ಕೆ ಪೊಲೀಸರು ಆಸ್ಪತ್ರೆಗ ಬಂದಿದ್ದರು. ನಾನು ದೂರನ್ನು ಬೆಳಗ್ಗೆ 6.00 ಕ್ಕೆ ಕೊಟ್ಟೆ ದೂರನ್ನು ಬೆಳಗ್ಗೆ 6.00 ಕ್ಕೆ ದಾಖಲು ಮಾಡಿದ್ದರು. ಎಷ್ಟು ಗಂಟೆಗೆ ಪೊಲೀಸರನ್ನು ಕರೆದುಕೊಂಡು ಮಹಜರ್ ಗೆ ಹೋದೆ ಎಂದು ಗೊತ್ತಿಲ್ಲ. ನಾನು ಒಬ್ಬನೇ ಸ್ಥಳಕ್ಕೆ ಹೋಗಿದ್ದೆ. ನಾನು ನಂತರದಲ್ಲಿ ಠಾಣೆಗೆ ಹೋಗಿಲ್ಲ.

4. ಗುಂಡಪ್ಪ ಕಾಂಗ್ರೆಸ್ ಪಕ್ಷದವರಾಗಿದ್ದು ಅವರಿಗೆ ಬೆಂಬಲ ನೀಡಿದ್ದ. ಪಟ್ಟಲಮ್ಮ ರವರಿಗೆ ನನ್ನ ಮಗ ಬೆಂಬಲ ಮಾಡಲಿಲ್ಲ. ಆರೋಪಿತರಿಗೂ ಹಾಗೂ ನನ್ನ ಮಗನಿಗೂ ರಾಜಕೀಯವಾಗಿ ಕೋಪ ಇದೆ ಎಂದರೆ ಸರಿ. ನನ್ನ ಮಗ ಪಟ್ಟಲಮ್ಮ ರವರ ಪರವಾಗಿ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡಿದ್ದ ಎಂದರೆ ಸರಿ ಅಲ್ಲ. ನನ್ನ ಮಗ ಬಾಡಿಗೆ ಟ್ರಾಕ್ಟರ್ ಚಾಲನೆ ಮಾಡುತ್ತಾರೆ. ನಮಗೆ ಸೇರಿದ ಯಾವುದೇ ಟ್ರಾಕ್ಟರ್ ಇರುವುದಿಲ್ಲ. ನಮಗೆ ಸೇರಿದ ಯಾವುದೇ ಆಸ್ತಿಗಳು ಆ ಊರಿನಲ್ಲಿ ಇಲ್ಲ ಹಾಗೂ ನಾವು ಕೂಡ ಆ ಊರಿನಲ್ಲಿ ವಾಸ ಇಲ್ಲ ಎಂದರೆ ಸರಿ. ನಾವು ಹಾರೋಹಳ್ಳಿಯಲ್ಲಿ ಇದ್ದೇವೆ ಎಂದರೆ ಸರಿ.

**SC No.274/2024**
**P.W. 3**

5. ಘಟನೆ ದಿನ ನನ್ನ ಮಗ ಯಾವ ಬಣ್ಣದ ಶರ್ಟ ದರಿಸಿದ್ದ ಎಂದು ನೋಡಿಲ್ಲ. ಪೊಲೀಸರು ಘಟನಾ ಸ್ಥಳದಲ್ಲಿ ಬಿದ್ದಿದ್ದ ವಸ್ತುಗಳನ್ನು ತೆಗೆದುಕೊಂಡರು. ರಸ್ತೆಯಲ್ಲಿ ಅಕ್ಕ ಪಕ್ಕ ಪೈಪ್ ಗಳು ಕೋಲುಗಳು ಬಿದ್ದಿರುತ್ತವೆ ಎಂದರೆ ಸರಿ. ಪೊಲೀಸರು ಏನು ಏನು ತೆಗೆದುಕೊಂಡರು ಎಂದು ನನಗೆ ಹೇಳಿಲ್ಲ. ಸ್ಥಳದಲ್ಲಿ ಯಾವುದೇ ಶರ್ಟ ಅನ್ನು ಪೊಲೀಸರು ತೆಗೆದುಕೊಂಡಿಲ್ಲ. ಆಸ್ಪತ್ರೆಯಲ್ಲಿ ವೈದ್ಯರು ನನ್ನ ಮಗನ ಶರ್ಟ ಅನ್ನು ತೆಗೆದುಕೊಂಡರು. ನನ್ನ ಮಗ ಆ ದಿನ ಶರ್ಟ ಮತ್ತು ಪ್ಯಾಂಟ್ ಯಾವ ಬಣ್ಣದ್ದು ಎಂದು ನೋಡಿಲ್ಲ. ನನ್ನ ಮಗ ಬಹಳ ಹುಡುಗರ ಸಂಘ ಮಾಡಿದ್ದಾನೆ ಮತ್ತು ನನ್ನ ಮಾತು ಕೇಳುವುದಿಲ್ಲ ಎಂದರೆ ಸರಿ ಅಲ್ಲ. ಈಗ ಎಲ್ಲಾ ಬಿಟ್ಟಿರುತ್ತಾನೆ. ನಾನು ಈ ಪ್ರಕರಣದಲ್ಲಿ ಏನನ್ನು ನೋಡಿಲ್ಲ ಮತ್ತು ಪೊಲೀಸರು ಕೇಳಿಕೊಟ್ಟಂತೆ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರನ್ನು ಕಂಡರೆ ನನ್ನ ಮಗನಿಗೆ ಆಗುವುದಿಲ್ಲ ಎಂಬ ಒಂದೇ ಉದ್ದೇಶಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.